159ನೇ ಅ
(24)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ:ಧನಂಜಯ ಸರ್ಜಿ ರವರು ಸದನಕ್ಕೆ ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**<u>ಸೂಚನೆ:-</u>**

ಇತ್ತೀಚಿನ ದಿನಗಳಲ್ಲಿ ಕುಸಿಯುತ್ತಿರುವ ಅಂತರ್ಜಲ ಮಟ್ಟ, ಬರಗಾಲ, ಕೊಳವೆ ಬಾವಿಗಳು ವಿಫಲತೆ, ಕುಡಿಯುವ ನೀರಿನ ಸಮಸ್ಯೆ, ಭವಿಷ್ಯದ ನೀರಿನ ಕೊರತೆ ನಿವಾರಿಸುವ ಸಲುವಾಗಿ, ರಾಜ್ಯದ ಎಲ್ಲಾ ರೀತಿಯ ಕಟ್ಟಡಗಳಲ್ಲಿ "ಮಳೆ ನೀರು ಕೊಯ್ಲು" (Rain Water Harvesting) ಕಡ್ಡಾಯವಾಗಿ ಅಳವಡಿಸುವ ಸಂಬಂಧ ಕಟ್ಟಡ ಪರವಾನಿಗೆ ನಿಯಮಗಳಿಗೆ ತಿದ್ದುಪಡಿ ತರುವುದು. ರಾಜ್ಯದ ಎಲ್ಲಾ ಸರ್ಕಾರಿ ಕಛೇರಿ, ಶಾಲಾ - ಕಾಲೇಜು - ಹಾಸ್ಟೆಲ್ ಕಟ್ಟಡಗಳಿಗೆ ಕಾಲಮಿತಿಯಲ್ಲಿ ಮಳೆ ನೀರು ಕೊಯ್ಲು ಮತ್ತು ಬೋರ್‌ವೆಲ್ ರಿಚಾರ್ಜ್ ವ್ಯವಸ್ಥೆ ಅಳವಡಿಸುವುದು ಸೇರಿದಂತೆ "ಮಳೆ ನೀರು ಕೊಯ್ಲು" ವಿಧಾನವನ್ನು ಯೋಜನೆಯಾಗಿ ಅನುಷ್ಠಾನಿಸುವ ಕುರಿತು ಮಾನ್ಯ ಪೌರಾಡಳಿತ ಸಚಿವರ ಗಮನ ಸೆಳೆಯುವುದು.

**<u>ಉತ್ತರ:-</u>**

ಸರ್ಕಾರದ ಅಧಿಸೂಚನೆ ಸಂಖ್ಯೆ.UDD 14 TTP 2017(P-3), Bengaluru, ದಿನಾಂಕ: 11.07.2017 ರಲ್ಲಿ ರಾಜ್ಯದಲ್ಲಿನ ಎಲ್ಲಾ ಮಹಾನಗರ ಪಾಲಿಕೆಗಳ ವ್ಯಾಪ್ತಿಗೆ ಅನ್ವಯಿಸುವಂತೆ Karnataka Muncipal Corporations Common Building By-laws 2017 ಅನ್ನು ಜಾರಿ ಮಾಡಿರುತ್ತದೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ.UDD 14 TTP 2017(P-4), Bengaluru, ದಿನಾಂಕ: 28.10.2017 ರಲ್ಲಿ ರಾಜ್ಯದಲ್ಲಿನ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸುವುದನ್ನು ಕಡ್ಡಾಯಗೊಳಿಸಿ, Karnataka Municipalities Building By-laws 2017 ಅನ್ನು ಜಾರಿ ಮಾಡಲಾಗಿದೆ. ಸದರಿ ಉಪವಿಧಿಗಳಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಕೆ ಮತ್ತು ನಿರ್ವಹಣೆಗಾಗಿ ಅಧ್ಯಾಯ 10ರಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ನಿಯಮಗಳನ್ನು ರೂಪಿಸಲಾಗಿರುತ್ತದೆ.

1. 100 ಚ.ಮೀ.ಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನದ ಮಾಲೀಕರುಗಳು ಕಡ್ಡಾಯವಾಗಿ ಕಟ್ಟಡ ನಿವೇಶನ ಪರವಾನಗಿ ಕೋರಿ ಸಲ್ಲಿಸುವ ಅರ್ಜಿಯೊಂದಿಗೆ ಕಟ್ಟಡಕ್ಕೆ ಮಳೆ ನೀರು ಕೊಯ್ಲು ವ್ಯವಸ್ಥೆ ಕಲ್ಪಿಸುವ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ.
2. ಸಂಬಂಧಿಸಿದ ಪ್ರಾಧಿಕಾರಗಳು/ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಲಾಗುವ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಅಳವಡಿಸಿಕೊಳ್ಳುವುದನ್ನು ಜಾರಿಗೊಳಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಮಳೆ ನೀರು ಕೊಯ್ಲು ಸೆಲ್ ಅನ್ನು ಸ್ಥಾಪಿಸುವುದನ್ನು Building By-laws ನಲ್ಲಿ ಅಳವಡಿಸಲಾಗಿರುತ್ತದೆ.
3. ಸ್ಥಳೀಯ ಸಂಸ್ಥೆ/ಪ್ರಾಧಿಕಾರವು ಕಟ್ಟಡ ಮುಕ್ತಾಯ ಪ್ರಮಾಣಪತ್ರ, ನಿರಾಪೇಕ್ಷಣಾ ಪತ್ರ ಜಾರಿ ಮಾಡುವ ಮುನ್ನ ಕಡ್ಡಾಯವಾಗಿ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಸಿರುವುದನ್ನು ಪರಿಶೀಲಿಸುವುದನ್ನು Building By-laws ನಲ್ಲಿ ಅಳವಡಿಸಲಾಗಿರುತ್ತದೆ.
4. ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ 1000 ಚ.ಮೀಟರ್‌ಗಿಂತ ಹೆಚ್ಚಿನ ವಿಸ್ತೀರ್ಣದ ಎಲ್ಲಾ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಅಳವಡಿಸುವುದನ್ನು ಹಾಗೂ ನಿರ್ವಹಣೆ ಮಾಡುತ್ತಿರುವುದನ್ನು ಪ್ರತಿ ವರ್ಷಕ್ಕೆ ಒಮ್ಮೆಯಾದರೂ ಪರಿಶೀಲಿಸಿ

ಖಚಿತಪಡಿಸಿಕೊಳ್ಳುವುದು. 1000 ಚ.ಮೀ.ಗಿಂತ ಕಡಿಮೆ ವಿಸ್ತೀರ್ಣದ ಕಟ್ಟಡಗಳ ಪೈಕಿ ಕನಿಷ್ಠ ಶೇ.10 ರಷ್ಟು ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿರುವುದನ್ನು ಪರಿಶೀಲಿಸುವುದನ್ನು Building By-laws ನಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

5. ಸಂಬಂಧಿಸಿದ ಪ್ರಾಧಿಕಾರಗಳು/ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಮತ್ತು ಸರ್ಕಾರಿ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಸಲು ಹಾಗೂ ನಿರ್ವಹಿಸಲು ಅವಶ್ಯವಿರುವ ಅನುದಾನವನ್ನು ತನ್ನ ವಾರ್ಷಿಕ ಆಯ-ವ್ಯಯದಲ್ಲಿ ಕಾಯ್ದಿರಿಸುವುದನ್ನು Building By-laws ನಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.
6. ಸಂಬಂಧಿಸಿದ ಪ್ರಾಧಿಕಾರ/ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ಅಂತರ್ಜಲ ಮಟ್ಟ, ನೀರಿನ ಲಭ್ಯತೆ/ಕೊರತೆ ಆಧಾರದ ಮೇಲೆ ಮಳೆ ನೀರು ಕೊಯ್ಲು, ಮರು ಪೂರಣ ವ್ಯವಸ್ಥೆಯನ್ನು ಅಳವಡಿಸುವುದನ್ನು ಉತ್ತೇಜಿಸಲು ಸೂಕ್ತ ಪ್ರೋತ್ಸಾಹಧನ /ಬಹುಮಾನಗಳನ್ನು ಕೊಡುವುದರ ಮೂಲಕ ಮಳೆ ನೀರಿನ ಬಳಕೆಯನ್ನು ಉತ್ತೇಜಿಸುವುದನ್ನು Building By-laws ನಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.

ಅದರಂತೆ, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸರ್ಕಾರಿ ಕಟ್ಟಡಗಳು ಹಾಗೂ ಉದ್ಯಾನವನಗಳಿಗೆ ಮಳೆ ನೀರು ಕೊಯ್ಲು ಮತ್ತು ಬೋರ್‌ವೆಲ್ ರಿಚಾರ್ಜ್ ವ್ಯವಸ್ಥೆಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಲಭ್ಯವಾಗುವ ವಿವಿಧ ಯೋಜನೆಯಿಂದ ಕೈಗೊಳ್ಳಲಾಗಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಒಡೆತನದ ಹಾಗೂ ಇತರೆ ಸರ್ಕಾರಿ 3208 ಕಟ್ಟಡಗಳಿಗೆ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಲಾಗಿರುತ್ತದೆ. 238 ಪಾರ್ಕ್‌ಗಳಿಗೆ ಹಾಗೂ 869 ಬೋರ್ ವೆಲ್‌ಗಳಿಗೆ ರಿಚಾರ್ಜ್ ವ್ಯವಸ್ಥೆಯನ್ನು ಅಳವಡಿಸಲಾಗಿರುತ್ತದೆ.

ರಾಜ್ಯ ಸರ್ಕಾರದ ಇತರೆ ಇಲಾಖೆಗಳ ಸರ್ಕಾರಿ ಕಛೇರಿ, ಶಾಲಾ – ಕಾಲೇಜು – ಹಾಸ್ಟೆಲ್ ಕಟ್ಟಡಗಳಿಗೆ ಆಯಾ ಇಲಾಖೆಗಳಿಂದ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಲು ಕಾಯ್ದೆಗಳನ್ನು ರೂಪಿಸಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಮುಂದುವರೆದು, ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ಹಾಗೂ ಜಲ ಶಕ್ತಿ ಸಚಿವಾಲಯ, ಭಾರತ ಸರ್ಕಾರ ರವರ ಸಹಯೋಗದೊಂದಿಗೆ **"ಜಲ ಸಂಚಯ ಜನ ಭಾಗಿದಾರಿ (JSJB)"** ಉಪ ಕ್ರಮದಡಿ **ಮಳೆ ನೀರು ಸಂಗ್ರಹಣೆ (Catch the Rain) ಅಭಿಯಾನ** ಎಂಬ ವಿಶೇಷ ಅಭಿಯಾನವನ್ನು ಕೈಗೊಳ್ಳಲಾಗುತ್ತಿದೆ. ಸದರಿ ಅಭಿಯಾನದಡಿ ನಗರಗಳಲ್ಲಿ ಹಾಗೂ ಪಟ್ಟಣಗಳಲ್ಲಿ ಮಳೆ ನೀರು ಸಂಗ್ರಹಣೆಗೆ ವಿವಿಧ ಚಟುವಟಿಕೆಗಳು, ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳು, ನೀರಿನ ಸಂರಕ್ಷಣೆ ಕುರಿತು ಅರಿವು ಮತ್ತು ಸಾರ್ವಜನಿಕ ಪಾಲ್ಗೊಳುವಿಕೆಯನ್ನು ಉತ್ತೇಜಿಸಲು 'ಜಲ ಸಂವಾದ'ಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. Catch the Rain ಅಭಿಯಾನದಡಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ದಿನಾಂಕ:15-07-2026 ರ ಪತ್ರದಲ್ಲಿ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ. (ಅನುಬಂಧದಲ್ಲಿ ಲಗತ್ತಿಸಿದೆ).

**ಸಂಖ್ಯೆ: ನಅಇ 224 ಜಿಇಎಲ್ 2026**

**(ಹೆಚ್.ಸಿ.ಬಾಲಕೃಷ್ಣ)**
ಪೌರಾಡಳಿತ ಸಚಿವರು

ಅನುಬಂಧ

ದೂರವಾಣಿ: 080-22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in

**ನಿರ್ದೇಶಕರ ಕಛೇರಿ**
ಪೌರಾಡಳಿತ ನಿರ್ದೇಶನಾಲಯ

**ಕರ್ನಾಟಕ ಸರ್ಕಾರ**

9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು
560001.

ಸಂಖ್ಯೆ: 2227512/DMA/DEV/OTH/132/2026 ದಿನಾಂಕ:15/07/2026

**ಗೆ,**
ಆಯುಕ್ತರು,
ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು

ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಜ್ಯದ ಎಲ್ಲಾ ಜಿಲ್ಲೆಗಳು

ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು
ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು

**ವಿಷಯ: ಮಳೆನೀರು ಸಂಗ್ರಹಣೆ (Catch the Rain) ಅಭಿಯಾನ ಹಮ್ಮಿಕೊಳ್ಳುವ ಕುರಿತು.**

**ಉಲ್ಲೇಖ:**
1. ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: JS(AMRUT)MISC./July/1, ದಿನಾಂಕ: 06.07.2026
2. ದಿನಾಂಕ: 14.07.2026 ರಂದು ನಡೆದ ಮಾನ್ಯ ಜಂಟಿ ಕಾರ್ಯದರ್ಶಿಗಳು, ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ ರವರ ವಿಡಿಯೋ ಸಂವಾದ ಸಭೆಯ ಮೌಖಿಕ ಆದೇಶ.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖ(1) &(2) ರನ್ವಯ ನಗರ ಪ್ರದೇಶದ ನೀರಿನ ಮಿತಬಳಕೆ, ಮಳೆನೀರು ಸಂಗ್ರಹಣೆ, ಅಂತರ್ಜಲ ಮರುಪೂರಣ, ಜಲಮೂಲಗಳ ಪುನಶ್ಚೇತನ ಮತ್ತು ನೀರಿನ ಸಂರಕ್ಷಣಾ ಚಟುವಟಿಕೆಗಳನ್ನು ದೇಶಾದ್ಯಂತ ಬಲಪಡಿಸುವ ಉದ್ದೇಶದಿಂದ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ, ಹಾಗೂ ಜಲಶಕ್ತಿ ಸಚಿವಾಲಯ, ಭಾರತ ಸರ್ಕಾರ ರವರುಗಳ ಸಹಯೋಗದೊಂದಿಗೆ "**ಜಲ ಸಂಚಯ ಜನ ಭಾಗಿದಾರಿ (JSJB)**" ಉಪಕ್ರಮದ ಅಡಿಯಲ್ಲಿ **ಮಳೆನೀರು ಸಂಗ್ರಹಣೆ (Catch the Rain) ಅಭಿಯಾನ** ಎಂಬ ವಿಶೇಷ ಅಭಿಯಾನವನ್ನು ಅನುಷ್ಠಾನ ಮಾಡಲಾಗುತ್ತಿದೆ.

ಈ ಉಪಕ್ರಮದ ಅಂಗವಾಗಿ, ದೇಶದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ **30 ದಿನಗಳ ರಾಷ್ಟ್ರವ್ಯಾಪಿ ಅಭಿಯಾನ**ವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಒಂದು ತಿಂಗಳ ಅವಧಿಯಲ್ಲಿ ಮಹಿಳೆಯರು, ಮಕ್ಕಳು, ಇತರ ನಾಗರಿಕರು, ಸಂಸ್ಥೆಗಳು ಹಾಗೂ ಸ್ಥಳೀಯ ಆಡಳಿತಗಳನ್ನು ಸುಸ್ಥಿರ ನೀರಿನ ಸಂರಕ್ಷಣೆಗೆ ಪ್ರೇರೇಪಿಸಿ, ಜಲ ಭದ್ರತೆಯನ್ನು ಬಲಪಡಿಸುವುದು ಹಾಗೂ ದೀರ್ಘಕಾಲಿಕ ಜಲ ಸ್ಥಿರತೆಗಾಗಿ ಹೆಚ್ಚು ಜನ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು ಈ ಅಭಿಯಾನದ ಪ್ರಮುಖ ಗುರಿಯಾಗಿದೆ

ಈ ಹಿನ್ನೆಲೆಯಲ್ಲಿ, ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಕೆಳಗಿನ ಆದ್ಯತಾ ಕಾರ್ಯಗಳನ್ನು ಕೈಗೊಳ್ಳಲು ಹಾಗೂ ಸಂಬಂಧಿತ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿ ಪೋರ್ಟಲ್ ನಲ್ಲಿ ಇಂಧೀಕರಿಸಲು (Update) ಈ ಮೂಲಕ ಸೂಚಿಸಿದೆ

**ಪ್ರಮುಖ ಅಂಶಗಳು:**

1. ಎಲ್ಲಾ ನಗರಗಳು ಮತ್ತು ಪಟ್ಟಣಗಳಲ್ಲಿ Catch the Rain 2026 ಚಟುವಟಿಕೆಗಳು ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು
2. ಅಭಿಯಾನಕ್ಕೆ ಸಂಬಂಧಿಸಿದ ಪೋಸ್ಟರ್‌ಗಳು, ಹೋರ್ಡಿಂಗ್‌ಗಳು, ಸ್ಟ್ಯಾಂಡಿಗಳು ಹಾಗೂ ಇತರ ಮಾಹಿತಿ-ಶಿಕ್ಷಣ-ಸಂವಹನ (IEC) ಸಾಮಗ್ರಿಗಳನ್ನು ಕನ್ನಡ /ಸ್ಥಳೀಯ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು
3. ನೀರಿನ ಸಂರಕ್ಷಣೆಯ ಕುರಿತು ಅರಿವು ಮತ್ತು ಸಾರ್ವಜನಿಕರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು "ಜಲ ಸಂವಾದ" ಹಾಗೂ ನಾಗರಿಕರ ಭಾಗವಹಿಸುವಿಕೆ ಸಭೆಗಳನ್ನು ನಡೆಸಬೇಕು
4. #CatchTheRain ಹ್ಯಾಶ್‌ಟ್ಯಾಗ್ ಬಳಸಿ ಮುದ್ರಣ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಜೊತೆಗೆ ಯಶೋಗಾಥೆಗಳು ಮತ್ತು ಉತ್ತಮ ಕಾರ್ಯಪದ್ಧತಿಗಳನ್ನು ದಾಖಲಿಸಿ ಪ್ರಚಾರಗೊಳಿಸಬೇಕು
5. ನೀರಿನ ಸಂರಕ್ಷಣೆಗೆ ಸಂಬಂಧಿಸಿದ ಮೂಲಸೌಕರ್ಯಗಳನ್ನು ಗುರುತಿಸಿ, ಅಭಿಯಾನದ ಅವಧಿಯಲ್ಲಿ ಉದ್ಘಾಟನೆ, ಸಾರ್ವಜನಿಕ ಸಮರ್ಪಣೆ ಹಾಗೂ ಶಂಕುಸ್ಥಾಪನಾ ಕಾರ್ಯಕ್ರಮಗಳನ್ನು ಪ್ರದರ್ಶಿಸಬೇಕು.
6. ಹತ್ತು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳಲ್ಲಿ 5 ರಿಂದ 10 ಎಕರೆ ವಿಸ್ತೀರ್ಣದ ಸ್ಪಾಂಜ್ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಿ ಅಂತರ್ಜಲ ಮರುಪೂರಣ ಮತ್ತು ನಗರಗಳ ಜಲ ಭದ್ರತೆ /ನೀರಿನ ಸಂರಕ್ಷಣೆ ಹೆಚ್ಚಿಸಬೇಕು

**ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಜಿಲ್ಲಾ ನಗರಾಭಿವೃದ್ಧಿಕೋಶ ಕಛೇರಿಗಳು ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು**

1. ದೈನಂದಿನ ಸಮನ್ವಯ, ಮೇಲ್ವಿಚಾರಣೆ ಮತ್ತು ಛಾಯಾಚಿತ್ರಗಳೊಂದಿಗೆ ವರದಿಗಾಗಿ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರನ್ನು ನೇಮಿಸಿದೆ.
2. ಸಂಬಂಧಿತ ಜಿಲ್ಲಾ ನಗರಾಭಿವೃದ್ಧಿ ಕೋಶ ಕಾರ್ಯಪಾಲಕ ಅಭಿಯಂತರರು ನಗರ ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ಸಲಹೆಗಳನ್ನು (ಅಂದಾಜು ಪಟ್ಟಿಗಳ ತಯಾರಿ, ಟೆಂಡರ್ ಪ್ರಕ್ರಿಯೆ ಹಾಗೂ ಕಾಮಗಾರಿಗಳ ಅನುಷ್ಠಾನವನ್ನು) ಸೂಕ್ತ ಮಾರ್ಗದರ್ಶನವನ್ನು ನೀಡುವುದು.
3. ಅಭಿಯಾನದ ಅಂಗವಾಗಿ, ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಸರ್ಕಾರಿ ಕಛೇರಿಗಳು ಹಾಗೂ ಇತರೆ ಸೂಕ್ತ ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್‌ಗಳು, ಹೋರ್ಡಿಂಗ್‌ಗಳು, ಸ್ಟ್ಯಾಂಡಿಗಳು ಹಾಗೂ ಇತರ ಮಾಹಿತಿ-ಶಿಕ್ಷಣ-ಸಂವಹನ (IEC) ಸಾಮಗ್ರಿಗಳನ್ನು ಸೂಕ್ತವಾಗಿ ಪ್ರದರ್ಶಿಸಬೇಕು. ಹಾಗೂ ಶಿಕ್ಷಣ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಶಾಲಾ ಕಾಲೇಜುಗಳ ಮೂಲಕ ಜಾಥಾವನ್ನು ಕೈಗೊಳ್ಳುವುದು.
4. ಎಲ್ಲಾ ಇಲಾಖೆಯ ಸರ್ಕಾರಿ ಕಛೇರಿಗಳ ಆವರಣಗಳಲ್ಲಿ Rain Harvesting & Recharge Structures ಗಳನ್ನೂ ಸಂಸ್ಥೆಗಳ ಲಭ್ಯವಿರುವ ಸ್ವಂತ ನಿಧಿಯಿಂದ ಅಳವಡಿಸಿಕೊಳ್ಳುವುದು.
5. ಎಲ್ಲಾ ಚಟುವಟಿಕೆಗಳು, ಛಾಯಾಚಿತ್ರಗಳು ಮತ್ತು ಪ್ರಗತಿ ವರದಿಗಳನ್ನು AMRUT Universe Platform ನಲ್ಲಿ (Login | AMRUT 2.0 Collaboration Platform)ನಿಯಮಿತವಾಗಿ ಅಪ್‌ಲೋಡ್ ಮಾಡಬೇಕು. ಜೊತೆಗೆ JSJB Portal (https://jsjb.mowr.gov.in) ನಲ್ಲಿ ಎಲ್ಲಾ ಜಲ ಸಂಚಯ ಜನ ಭಾಗಿದಾರಿ ಚಟುವಟಿಕೆಗಳು ಮತ್ತು ಸಂಬಂಧಿತ ದಾಖಲೆಗಳನ್ನು ದಾಖಲಿಸಬೇಕು/ಇಂಧೀಕರಿಸಬೇಕು.
6. ನಗರ ಸ್ಥಳೀಯ ಸಂಸ್ಥೆಗಳೊಂದಿಗೆ ನಿಯಮಿತವಾಗಿ ಪ್ರಗತಿ ಪರಿಶೀಲನೆ ನಡೆಸಿ, ಚಟುವಟಿಕೆಗಳ ಸಮಯೋಚಿತ ಅನುಷ್ಠಾನ ಮತ್ತು ವರದಿಗೊಳಿಸುವಿಕೆಯನ್ನು ಖಚಿತಪಡಿಸಬೇಕು
7. ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಮಾರ್ಗಸೂಚಿ /ನಿಯಮಗಳನ್ವಯ ಈ ಅಭಿಯಾನವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸುವಂತೆ ನೋಡಿಕೊಂಡು ಈ ಅಭಿಯಾನವನ್ನು ಎಲ್ಲಾ ಜಿಲ್ಲೆಗಳು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ವೈಯಕ್ತಿಕ ಗಮನ ನೀಡುವಂತೆ ವಿನಂತಿಸಲಾಗಿದೆ. ಎಲ್ಲಾ ಜಿಲ್ಲೆಗಳು ಇದಕ್ಕೆ ಪೂರಕ ಹಾಗೂ ಸಮಗ್ರ ಚಿಂತನೆಯಿಂದ **"Catch the Rain 2026"** ಅನ್ನು ನೀರಿನ ಸಂರಕ್ಷಣೆಯ ಜನಾಂದೋಲನವಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿ ಯಶಸ್ವಿಗೊಳಿಸಲು ಕೋರಿದೆ.

**ಲಗತ್ತು:** ಕೇಂದ್ರ ಸಚಿವಾಲಯದ ಪತ್ರ ಮತ್ತು
ಅಭಿಯಾನಕ್ಕೆ ಪೂರಕವಾದ ಅನುಬಂಧಗಳು

15.7.26.
ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

**ಪ್ರತಿಯನ್ನು:**

1. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ, ಬೆಂಗಳೂರು ರವರು ತಮ್ಮ ಅಧೀನ ಜಿಲ್ಲೆಗಳ ಸಿಬ್ಬಂದಿ ಅಧಿಕಾರಿಗಳಿಗೆ ಅಗತ್ಯ ಕ್ರಮ ವಹಿಸಲು ಕೋರಿದೆ.
2. ಮುಖ್ಯ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ಅಗತ್ಯ ಕ್ರಮಕ್ಕಾಗಿ.
3. ಅಧೀಕ್ಷಕ ಅಭಿಯಂತರರು ಹಾಗೂ ನೋಡಲ್ ಅಧಿಕಾರಿಗಳು, ಅಡಿಯಲ್ಲಿ **ಮಳೆನೀರು ಸಂಗ್ರಹಣೆ (Catch the Rain)** ಅಭಿಯಾನ, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ಅಗತ್ಯ ಕ್ರಮಕ್ಕಾಗಿ
4. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ ಮತ್ತು ಮಹಾನಗರಪಾಲಿಕೆಗಳು ಅಗತ್ಯ ಕ್ರಮಕ್ಕಾಗಿ
5. ಕಛೇರಿ ಪ್ರತಿ